K-tech

भारतीय विज्ञान संस्थान

KSCST

ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ

CySecK
Cyber Security Karnataka
K-Tech CoE for Cyber Security

# ಸೈಬರ್ ವಾರ್ತಿಕ

## ಸೆಪ್ಟೆಂಬರ್ 2022

# CYBER VARTIKA

## SEPTEMBER 2022

### ಈ ಸಂಚಿಕೆಯಲ್ಲಿ


-ಮುನ್ನುಡಿ

-ಸಂಗ್ರಹಿಸಿದ ಸುದ್ದಿ

-ಜಾಗೃತಿ ಭಿತ್ತಿ ಚಿತ್ರಗಳು ಹಾಗು ವೀಡಿಯೊಗಳು

-ಸೈಸೆಕ್ ನವೀಕರಣಗಳು


### IN THIS ISSUE


-Foreword

-Curated news

-Awareness posters and Videos

-CySecK Updates


ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ಧಿಪತ್ರಿಕೆಯ ಮುಕ್ತ ಚಂದಾದಾರರಾಗಿ!
*https://zcmp.in/BH6y*

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

# ಮುನ್ನುಡಿ
# FOREWORD



ಇಡೀ ಜಗತ್ತಿನಲ್ಲಿ ಅಕ್ಟೋಬರ್ ಅನ್ನು ಸೈಬರ್ ಸುರಕ್ಷತೆ ತಿಳಿವು ತಿಂಗಳು ಎಂದು ಆಚರಿಸಲಾಗುತ್ತದೆ. ಸೈಬರ್ ಅಪಾಯಗಳು, ಸೈಬರ್ ಚೊಕ್ಕತನ ಹಾಗೂ ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳ ಬಗೆಗಿನ ತಿಳಿವನ್ನು ಬೆಳೆಸಿಕೊಳ್ಳುವುದಕ್ಕೆ ನಾವು ಎಷ್ಟು ಪ್ರಾಮುಖ್ಯತೆ ನೀಡಬೇಕೆಂದು ಈ ಹೆಜ್ಜೆಯೇ ತೋರಿಸುತ್ತದೆ.

ತಂತ್ರಜ್ಞಾನ ಬಿರುಸಿನಿಂದ ಬೆಳೆಯುತ್ತಿದೆ. ಹೊಚ್ಚಹೊಸ ತಾಂತ್ರಿಕ ಮುನ್ನಡೆಗಳಿಂದಾಗಿ ನಮ್ಮ ಜಗತ್ತು ಕೂಡ ಅಷ್ಟೇ ಬಿರುಸಿನಿಂದ ಬದಲಾಗುತ್ತಿದೆ. ನಮ್ಮ ವೈಯಕ್ತಿಕ ಬದುಕಿನಲ್ಲೇ ಆಗಲಿ ಇಲ್ಲವೇ ನಮ್ಮ ವ್ಯಾಪಾರದ ಉದ್ದೇಶಗಳಿಗೇ ಆಗಲಿ, ನಾವು ತಂತ್ರಜ್ಞಾನವನ್ನು ಹೇಗೆ ಬಳಸುತ್ತೇವೆ ಎಂಬುದು ಕೂಡ ಬದಲಾಗುತ್ತಿದೆ. ಸೈಬರ್ ಮೋಸಗಾರರು ಇದನ್ನೇ ಒಳ್ಳೆಯ ಅವಕಾಶವಾಗಿ ಬಳಸಿಕೊಳ್ಳುತ್ತಾರೆ ಮತ್ತು ಡಿಜಿಟಲ್ ತಂತ್ರಜ್ಞಾನಗಳನ್ನು ಬಳಸುವಾಗ ಎದುರಾಗುವ ಅಪಾಯಗಳ ಬಗ್ಗೆ ತಿಳಿದುಕೊಳ್ಳದ ಜನರಿಗಾಗಿ ಬೇಟೆಯಾಡುತ್ತಾರೆ.

ಕರ್ನಾಟಕವು ಭಾರತದಲ್ಲೇ ಮುಂಚೂಣಿಯ ತಂತ್ರಜ್ಞಾನ ಕೇಂದ್ರವಾಗಿದೆ. ಇದರಿಂದಾಗಿ ನಮ್ಮ ರಾಜ್ಯದಲ್ಲಿ ತಂತ್ರಜ್ಞಾನದ ಪರಿಸರ ವ್ಯವಸ್ಥೆ ಏಳಿಗೆ ಹೊಂದಿದೆ ಹಾಗೂ ಕರ್ನಾಟಕದ ಜನ ಇತ್ತೀಚಿನ ತಂತ್ರಜ್ಞಾನಗಳಿಗೆ ತೆರೆದುಕೊಳ್ಳುತ್ತಿದ್ದಾರೆ ಮತ್ತು ಅವನ್ನು ತಮ್ಮ ದೈನಂದಿನ ಬದುಕಿನಲ್ಲಿ ಬಳಸುತ್ತಿದ್ದಾರೆ. ಕೆಐಟಿಎಸ್ (ಕರ್ನಾಟಕ ಇನೊವೇಶನ್ ಟೆಕ್ನಾಲಜಿ ಸೊಸೈಟಿ) ನಲ್ಲಿ ನಾವು ನಮ್ಮ ಹಲವು ಸೆಂಟರ್ಸ್ ಆಫ್ ಎಕ್ಸಲೆನ್ಸ್, ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್, ಹೊಸ ಕಾಲದ ಇನ್‌ಕ್ಯುಬೇಶನ್ ನೆಟ್‌ವರ್ಕ್ ಮತ್ತು ಎಲಿವೇಟ್ ಪ್ರೋಗ್ರಾಮ್‌ನಂತಹ ಸ್ಟಾರ್ಟ್-ಅಪ್‌ಗೆ ಬೆಂಬಲ ಕೊಡುವ ತೊಡಗಿಕೆಗಳ ಮೂಲಕ ತಂತ್ರಜ್ಞಾನ ಮತ್ತು ರಾಜ್ಯದಲ್ಲಿನ ಹೊಸಹಮ್ಮುಗೆಯ ಪರಿಸರ ವ್ಯವಸ್ಥೆಗೆ ಸಕ್ರಿಯವಾಗಿ ಬೆಂಬಲ ನೀಡುತ್ತಿದ್ದೇವೆ.

ತಂತ್ರಜ್ಞಾನ ಪರಿಣತಿ ಎಂದರೆ ಬರೀ ಇತ್ತೀಚಿನ ತಂತ್ರಜ್ಞಾನಗಳನ್ನು ಬಳಸುವುದಷ್ಟೇ ಅಲ್ಲ, ಅದರೊಂದಿಗೆ ಎದುರಾಗುವ ಅಪಾಯಗಳ ಅರಿವನ್ನು ಹೊಂದಿರುವುದು ಕೂಡ ಆಗಿದೆ. ಇಡೀ ಅಕ್ಟೋಬರ್ ಅನ್ನು ಸೈಬರ್ ಸುರಕ್ಷತೆ ತಿಳಿವು ತಿಂಗಳು ಎಂದು ಆಚರಿಸುವುದರಿಂದ ಹೆಚ್ಚಿನ ನಾಗರಿಕರಿಗೆ ಈ ಅಪಾಯಗಳ ಅರಿವುಂಟಾಗಿ ಒಳ್ಳೆಯ ಸೈಬರ್ ಅಭ್ಯಾಸಗಳ ಬಗ್ಗೆ ಅವರು ತಿಳಿಯುತ್ತಾರೆ ಎಂಬುದು ನನ್ನ ನಂಬಿಕೆ.

CySecK - ಸೈಬರ್ ಸುರಕ್ಷತೆಯಲ್ಲಿನ ನಮ್ಮ ಕೆ-ಟೆಕ್ ಸೆಂಟರ್ ಆಫ್ ಎಕ್ಸಲೆನ್ಸ್, ಈ ಇಡೀ ತಿಂಗಳು ರಾಜ್ಯದಲ್ಲಿ ಸಮಾಜದ ಎಲ್ಲ ವರ್ಗಗಳನ್ನು ತಲುಪಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಈ ಕಾರ್ಯಕ್ರಮಗಳು ಗೆಲುವು ಕಾಣಲಿ ಎಂದು ಹಾರೈಸುತ್ತೇನೆ. ನೀವೆಲ್ಲರೂ ಅವುಗಳಲ್ಲಿ ಪಾಲ್ಗೊಂಡು ನಿಮ್ಮ ತಂತ್ರಜ್ಞಾನ ಪರಿಣತಿ ಹೆಚ್ಚಿಸಿಕೊಳ್ಳುವಿರಿ ಎಂದು ನಂಬಿದ್ದೇನೆ. ನೀವು ಪಾಲ್ಗೊಂಡು ಬಹುಮಾನಗಳನ್ನು ಗೆಲ್ಲಬಹುದಾದ ಕೆಲವು ಮೋಜಿನ ಸ್ಪರ್ಧೆಗಳು ಕೂಡ ಇರಲಿವೆ.

ಎಲ್ಲರಿಗೂ ನವರಾತ್ರಿ ಮತ್ತು ದಸರಾ ಹಬ್ಬದ ಸವಿಹಾರೈಕೆಗಳು.

ಅಕ್ಕರೆಯಿಂದ,
ಮೀನಾ ನಾಗರಾಜ್ ಸಿಎನ್
ನಿರ್ದೇಶಕರು - ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ಎಮ್‌ಡಿ-ಕೆಐಟಿಎಸ್

October is observed as Cyber Security Awareness Month globally. This by itself shows the importance that we need to place on awareness of cyber risks, cyber hygiene and dos and don'ts.

Technology is evolving rapidly, and with it, our world is also changing due to the impact of these technological advancements. How we use technology – whether in our personal lives or for our business purposes – is also changing all the time. Cyber fraudsters use this as an opportunity and look for victims who are not aware of the risks when using digital technologies.

Karnataka is India's foremost technology hub. This means there is a thriving technology ecosystem in the state, and many residents of the state are exposed to and use the latest technologies in their daily lives. We at KITS (Karnataka Innovation Technology Society) are actively promoting the technology and innovation ecosystem in the state through our many Centres of Excellence, Technology Business Incubators, New Age Incubation Networks and start-up support initiatives like the Elevate programme.

Technology savviness is not just in using the latest technologies, but also in understanding its' risks. I'm sure the observation of the whole of October as Cyber Security Awareness Month will help make more citizens understand these risks and become aware of best practices.

CysecK – our K-tech Centre of Excellence in Cyber Security – will be doing many programmes to reach out to all segments of the society in the state throughout this month. I wish success for these programmes. I hope all of you take participate in it and make yourselves more technologically savvy. There are some fun contests also planned that you can participate and win prizes.

Navaratri and Dasara wishes to all.

Best regards,
Meena Nagaraj CN
Director – Electronics, IT, BT and MD-KITS

# ಪ್ರಮುಖ ಸೈಬರ್ ಸುದ್ದಿ

## ಜಗತ್ತಿನ ಬೇರೆ ಮಕ್ಕಳ ಹೋಲಿಕೆಯಲ್ಲಿ ಭಾರತದ ಮಕ್ಕಳು ಹೆಚ್ಚಿನ ಸೈಬರ್ ಬೆದರಿಕೆಗೆ ಒಳಗಾಗುತ್ತಾರೆ

ಇತ್ತೀಚಿನ ಮೆಕ್‌ಅಫೀ ಜಾಗತಿಕ ಸರ್ವೇ ಹೇಳುವಂತೆ, ಸರ್ವೇಯಲ್ಲಿ ಪಾಲ್ಗೊಂಡ 45% ನಷ್ಟು ಭಾರತದ ಮಕ್ಕಳು, ಯಾರೊ ಗೊತ್ತಿಲ್ಲದವರಿಗೆ ತಾವು ಸೈಬರ್ ಬೆದರಿಕೆ ಹಾಕಿರುವುದಾಗಿ ಹೇಳಿದ್ದಾರೆ. ಅದೇ ಜಾಗತಿಕವಾಗಿ 17% ನಷ್ಟು ಮಕ್ಕಳು ಈ ಕೆಲಸ ಮಾಡಿದ್ದಾರೆ. ಇದರ ಜೊತೆಗೆ, ಜಾಗತಿಕವಾಗಿ ತಮಗೆ ಗೊತ್ತಿರುವವರಿಗೆ ಸೈಬರ್ ಬೆದರಿಕೆ ಹಾಕಿದ 21% ಮಕ್ಕಳಿಗೆ ಹೋಲಿಸಿದರೆ, ಭಾರತದಲ್ಲಿ 48% ನಷ್ಟು ಮಕ್ಕಳು ಇದನ್ನು ಮಾಡಿದ್ದಾರೆ.
ಕೋವಿಡ್ ಬಂದಾಗಿನಿಂದ ಡಿಜಿಟಲ್ ಡಿವೈಸ್‌ಗಳನ್ನು ಬಳಸುವ ಮಕ್ಕಳ ಎಣಿಕೆ ತುಂಬ ಹೆಚ್ಚಾಗಿದೆ. ಜಗತ್ತಿನ ಬೇರೆ ದೇಶಗಳ ಮಕ್ಕಳಿಗೆ ಹೋಲಿಸಿದರೆ, ಚಿಕ್ಕ ಹರೆಯದಲ್ಲೇ ಮಿಂಬಲೆಯಲ್ಲಿ (ಇಂಟರ್‌ನೆಟ್) ಖಾತೆಗಳನ್ನು ತೆರೆದು ತಮ್ಮ ಇರುವಿಕೆಯನ್ನು ಹೊಂದುವವರಲ್ಲಿ ಭಾರತದ ಮಕ್ಕಳೂ ಇದ್ದಾರೆ. ಇದರಿಂದಾಗಿ ಅವರು ಹೆಚ್ಚೆಚ್ಚು ಸೈಬರ್ ಬೆದರಿಕೆಯಂತಹ ಆನ್‌ಲೈನ್ ಅಪಾಯಗಳಿಗೆ ಒಳಗಾಗುತ್ತಿರುವುದಾಗಿ ವರದಿ ಹೇಳಿದೆ.

## ತಡೆಹಿಡಿಯಲಾದ ಒಪ್ಪಿಗೆ ಪಡೆಯದ ಫಾರೆಕ್ಸ್ ಆಪ್ ಮತ್ತು ವೆಬ್‌ಸೈಟ್‌ಗಳನ್ನು ಆರ್‌ಬಿಐ ಪಟ್ಟಿ ಮಾಡಿದೆ

ಸೆಪ್ಟೆಂಬರ್ ಆರಂಭದಲ್ಲಿ, ಫಾರೆಕ್ಸ್‌ನಲ್ಲಿ ತೊಡಗಿಸಿಕೊಳ್ಳಲು ಇಲ್ಲವೇ ಫಾರೆಕ್ಸ್ ವಹಿವಾಟುಗಳಿಗೆ ಎಲೆಕ್ಟ್ರಾನಿಕ್ ಟ್ರೇಡಿಂಗ್ ಪ್ಲಾಟ್‌ಫಾರ್ಮ್ ನಡೆಸಲು ಒಪ್ಪಿಗೆ ಪಡೆಯದ ಆಪ್ ಮತ್ತು ಸಂಸ್ಥೆಗಳ ಹೆಸರಿರುವ "ಎಚ್ಚರಿಕೆ ಪಟ್ಟಿ"ಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿತು. ಹೂಡಿಕೆಯ ಮೇಲೆ ಹೆಚ್ಚಿನ ಲಾಭ ಬರುವುದೆಂದು ಮಾತು ಕೊಟ್ಟು ಹಲವು ನೋಂದಣಿಯಾಗದ ಸಂಸ್ಥೆಗಳು ಬಳಕೆದಾರರನ್ನು ಸೆಳೆಯುತ್ತವೆ. ಆದರೆ, ಅಂತಹ ಆಪ್‌ಗಳನ್ನು ಬಳಸುವುದು ಅಪಾಯಕ್ಕೆ ಎಡೆಮಾಡಿಕೊಡುವುದಲ್ಲದೆ ಬಳಕೆದಾರರು ಕಾನೂನಿನ ತೊಂದರೆಗೂ ಸಿಲುಕಬಹುದು.
ಭಾರತದಲ್ಲಿ ತಡೆಹಿಡಿಯಲಾದ ಫಾರೆಕ್ಸ್ ವೆಬ್‌ಸೈಟ್‌ಗಳ ಪಟ್ಟಿ: https://rbi.org.in/scripts/bs_viewcontent.aspx?Id=4183

## PUBG, FIFA, ಮೈನ್‌ಕ್ರಾಫ್ಟ್ ಮತ್ತು 25 ಇತರ ಹೆಸರಾಂತ ಆಟಗಳಲ್ಲಿ ಅಪಾಯಕಾರಿ ಸಾಫ್ಟ್‌ವೇರ್

ಕ್ಯಾಸ್ಪರ್‌ಸ್ಕಿ ವರದಿ ಹೇಳುವಂತೆ, ರೆಡ್‌ಲೈನರ್ ಎಂಬ ಅಪಾಯಕಾರಿ ಸಾಫ್ಟ್‌ವೇರ್ ರೋಬ್ಲಾಕ್ಸ್, FIFA, PUBG, ಮೈನ್‌ಕ್ರಾಫ್ಟ್ ಹಾಗೂ ಇನ್ನಷ್ಟುಆಟಗಳು ಸೇರಿದಂತೆ 28 ಆಟಗಳ ಒಳಗೆ ಸೇರಿಕೊಂಡಿದೆ. ವರದಿಗಳ ಪ್ರಕಾರ, ಈ ದಾಳಿಗಳಲ್ಲಿ ಹೆಚ್ಚಿನವು ಜುಲೈ 2021 ಮತ್ತು ಜೂನ್ 2022 ರನಡುವೆ ನಡೆದದ್ದು. ಇದರಿಂದ 3,84,000 ಕ್ಕಿಂತ ಹೆಚ್ಚಿನ ಬಳಕೆದಾರರಿಗೆ ತೊಂದರೆ ಆಯಿತು ಮತ್ತು ಹೆಚ್ಚು ಕಡಿಮೆ 92,000 ಅಪಾಯಕಾರಿಕಡತಗಳನ್ನು ಬಳಸಲಾಯಿತು.
ಮಿಂಬಲೆಯಲ್ಲಿ ಹರಿದಾಡುತ್ತಿರುವ ಹಲವಾರು ವರದಿಗಳ ಪ್ರಕಾರ, ಸೈಬರ್ ಅಪರಾಧಿಗಳು ಗೇಮರ್‌ಗಳನ್ನು ಗುರಿಯಾಗಿಸಿದ್ದು, ಅವರ ಕಾರ್ಡ್ ವಿವರಗಳನ್ನು ಕದ್ದು ಮತ್ತು ಗೇಮಿಂಗ್ ಖಾತೆಗಳಿಗೆ ಕನ್ನ ಹಾಕಿ ದುಬಾರಿ ಸ್ಕಿನ್‌ಗಳನ್ನು ಮತ್ತು ಇನ್-ಗೇಮ್ ಹಣವನ್ನು ಕದಿಯುತ್ತಾರೆ.

## ZOOM ನಲ್ಲಿ ಹಲವು ಕೊರತೆಗಳಿರುವ ಎಚ್ಚರಿಕೆ ನೀಡಿದ CERT-IN

CERT-In ಕೊಟ್ಟಿರುವ ಎಚ್ಚರಿಕೆಯಂತೆ, Zoom ಅಪ್ಲಿಕೇಶನ್‌ನಲ್ಲಿರುವ ಕೊರತೆಗಳಲ್ಲೊಂದನ್ನು ಬಳಸಿಕೊಂಡು, ದೂರದಲ್ಲಿ ಕುಳಿತ ಒಪ್ಪಿಗೆ ಪಡೆಯದದಾಳಿಕೋರನೊಬ್ಬ, ವಿಡಿಯೊ ಚಾಟ್‌ನಲ್ಲಿ ಪಾಲ್ಗೊಂಡ ಇತರರಿಗೆ ಕಾಣಿಸದಂತೆ Zoom ಮೀಟಿಂಗ್ ಸೇರಿಕೊಳ್ಳಬಹುದು.
ಮುಂದೆ ಆಗಬಹುದಾದ ತೊಂದರೆಗಳನ್ನು ತಡೆಗಟ್ಟಲು. ಈ ವಿಡಿಯೊ ಕಾನ್ಫರೆನ್ಸಿಂಗ್ ಸಾಫ್ಟ್‌ವೇರ್‌ನ ಇತ್ತೀಚಿನ ಆವೃತ್ತಿಯನ್ನು ಇಳಿಸಿಕೊಳ್ಳಬೇಕಾಗಿಬಳಕೆದಾರರಿಗೆ ಸಲಹೆ ನೀಡಲಾಗಿದೆ.

## ಏರ್ ಇಂಡಿಯಾ ಡೇಟಾ ಕಳ್ಳತನ: ಬಿ2ಬಿ ಬಳಕೆದಾರರ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳ ಸೋರಿಕೆ

ಆಕಾಶ ಏರ್‌ನಲ್ಲಿ ಡೇಟಾ ಕಳ್ಳತನವಾದ ಕೆಲವೇ ದಿನಗಳಲ್ಲಿ ಏರ್ ಇಂಡಿಯಾದಲ್ಲೂ ಡೇಟಾ ಸೋರಿಕೆಯಾಗಿದೆ. ಸಣ್ಣ ಎಣಿಕೆಯ ಬಿ2ಬಿ ಬಳಕೆದಾರರಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಸೋರಿಕೆಯಾಗಿರುವುದರ ಬಗ್ಗೆ ಏರ್‌ಲೈನ್ ಕಂಪನಿ ತನ್ನ ಬಿ2ಬಿ ಬಳಕೆದಾರರಿಗೆ ಇಮೇಲ್ ಮೂಲಕ ತಿಳಿಸಿದೆ.ಅಕ್ಸೆಲ್ಯಾ ಸೊಲ್ಯೂಶನ್ಸ್ ಲಿಮಿಟೆಡ್ ನೋಡಿಕೊಳ್ಳುತ್ತಿರುವ ಏರ್ ಇಂಡಿಯಾ ಜಿಎಸ್‌ಟಿ ಪೋರ್ಟಲ್‌ನಲ್ಲಿ ಡೇಟಾ ಸೋರಿಕೆಯಾಗಿತ್ತು.
ಒಪ್ಪಿಗೆ ಪಡೆಯದ ಯಾರೊ ಹೊರಗಿನವರು ಸೋರಿಕೆಯಾದ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಳಸಿ, ಈ ಐಡಿಗಳಿಗೆ ಸಂಬಂಧಿಸಿದಜಿಎಸ್‌ಟಿ ಬಿಲೆಪಟ್ಟಿಗಳನ್ನು ನೋಡಿ ಕಂಪನಿಯೇ ಇಮೇಲ್ ಮೂಲಕ ಕಳುಹಿಸಿದ್ದು ಎನ್ನುತ್ತಾ, ಅವನ್ನು ಸಾರ್ವಜನಿಕ ವಲಯದಲ್ಲಿ ಪ್ರಕಟಿಸಿಬಿಟ್ಟರು.

## ಕರ್ನಾಟಕದಲ್ಲಿ ಗುರುತು ಕಳ್ಳತನ ಪ್ರಕರಣಗಳ ಇಳಿಕೆ, ಆದರೂ ಅಂತಹ 43% ನಷ್ಟು ಪ್ರಕರಣಗಳು ಇನ್ನೂ ವರದಿಯಾಗುತ್ತಿವೆ: ಎನ್‌ಸಿಆರ್‌ಬಿ

2019 ರಲ್ಲಿ 85% ಮತ್ತು 2020 ರಲ್ಲಿ 68% ನಷ್ಟು ಗುರುತು ಕಳ್ಳತನ ಪ್ರಕರಣಗಳು ದಾಖಲೆಯಾದ ಕರ್ನಾಟಕದಲ್ಲಿ, 2021 ರಲ್ಲಿ ಈ ಪ್ರಕರಣಗಳು 43% ಗೆ ಇಳಿದಿವೆ. ರಾಜ್ಯ ಮತ್ತು ದೇಶದಲ್ಲಿ ವರದಿಯಾದ ಕಂಪ್ಯೂಟರ್-ಸಂಬಂಧಿತ ಅಪರಾಧಗಳಲ್ಲಿ ಗುರುತು ಕಳ್ಳತನ ಪ್ರಕರಣಗಳದ್ದೇ ಸಿಂಹಪಾಲು. 2021 ರಲ್ಲಿ, 19,751 ಕಂಪ್ಯೂಟರ್-ಸಂಬಂಧಿತ ಅಪರಾಧಗಳಲ್ಲಿ 4047 (20%) ಪ್ರಕರಣಗಳು ಇದೇ ಗುಂಪಿಗೆ ಸೇರಿದವು.

# TOP CYBER NEWS

## Indian children experience significant cyberbullying than children worldwide

According to a recent McAfee global survey, 45% of participating children in India said they had cyberbullied a stranger, while 17% said the same globally. In addition, 48% of Indian children reported cyberbullying someone they knew, compared to 21% of children worldwide.

The pandemic accelerated the adoption of digital devices by children. In comparison to their peers worldwide, children in India are among the youngest to reach mobile maturity and report experiencing online risks, such as cyberbullying, at a higher rate, said the report.

## RBI lists banned unauthorized forex apps and websites

In early September, the Reserve Bank of India issued a "Alert List" containing the names of apps and organisations that have not been authorized to deal in forex or operate electronic trading platforms for forex transactions. Many unregistered platforms entice users by promising high returns on investment. However, using such apps is dangerous and puts users at risk of legal issues.

Checklist of banned forex websites in India- https://rbi.org.in/scripts/bs_viewcontent.aspx?Id=4183

## PUBG, FIFA, Minecraft, and 25 other popular games infected with dangerous malware

According to a Kaspersky report, a dangerous malware called RedLiner has exploited 28 games, including Roblox, FIFA, PUBG, Minecraft, and many others. According to reports, most of these attacks occurred between July 2021 and June 2022, affecting over 3,84,000 users and employing approximately 92,000 malicious files.

According to several reports circulating on the internet, cybercriminals are targeting gamers to steal expensive skins and in-game cash by hacking their card details and accessing their gaming accounts.

## CERT-In issues advisory for Zoom users of multiple vulnerabilities

According to CERT-In, one of the vulnerabilities could allow an unauthorized remote attacker to join a Zoom meeting without appearing to other participants in the video chat.

Users are advised to update the most recent video conferencing software version to prevent any potential issues.

## Air India data breach: B2B customers' login ids and passwords compromised

Air India's data has been compromised just days after Akasa Air's data breach. The airline notified its B2B customers via email about the compromise of a small number of B2B clients' login user IDs and passwords. This data breach occurred at the Air India GST portal, which Accelya Solutions Ltd provides.

An unauthorised party used the compromised user IDs and passwords to access their GST invoices and publish them in the public domain, claiming the company sent the email.

## Karnataka has seen a decrease in identity theft cases, but it still accounts for 43% of all such cases: NCRB

Karnataka, which accounted for 85% of identity theft cases registered in 2019 and 68% in 2020, saw cases drop to 43% in 2021. Identity theft cases account for the lion's share of computer-related crimes reported in the state and the country. In 2021, 4,047 (20%) of the 19,751 computer-related crimes fell into this category.

# ONLINE FRAUDS

## Senior IAS officer from Karnataka photo used inappropriately on social media

A senior IAS officer in Karnataka has filed a complaint with a cyber crime and economic offenses police station in Bengaluru, alleging that his photo is being used on social media by unidentified individuals to solicit funds from his colleagues.

## Engineer duped of Rs 80,000 in online fraud

A young engineer on an online house hunt in Karnataka lost Rs 82,100 to an online fraudster posing as a house owner. Rs 82,100 was transferred into the fraudster's account in five to six transactions. The fraudster continued to demand money under the guise of the transactions failing in the middle. When the scammer asked for Rs 10,000 more, the youngster realized he was being duped. He immediately reported the incident to the cyber crime branch.

## Man falls victim to sextortion and pays blackmailers Rs 5.28 lakh

A woman befriended a 54-year-old widower on Facebook and later conned him into stripping on the phone, making him a victim of sextortion.
The woman used the intimate video to extort Rs 5.28 lakh over the phone from other fraudsters who impersonated a Central Bureau of Investigation (CBI) officer and a YouTube official.

## Mangaluru man loses Rs 5.35 lakh in online fraud

The victim received a phone call from the fraudster, who introduced himself as his friend's brother. The fraudster duped the man into paying Rs 5 lakh for his brother's surgery.
The victim, believing the caller, provided the OTP number. The fraudster withdrew Rs 4.50 lakh in one transaction and the rest in installments. The total withdrawal amount was Rs 5.35 lakh.

## Bengaluru woman loses 94,367 while attempting to pay cab cancellation fees

The victim had booked a cab to visit her relatives online and then cancelled the trip. When the driver asked her to pay the cancellation fees, she went online and called the executive at the number provided.
The customer service representative offered to assist her and sent her a link to download Anydesk [a programme that allows remote access and control of a phone or computer] and scan her debit card. A total of 94,367 was deducted as soon as she scanned her debit card.

## Woman falls victim to online fraudsters posing as representatives of a popular recruitment website

The woman received phone calls from representatives who wanted her to sign up for the 'pro' service for Rs 49. The callers directed her to a website that mirrored the actual one. The callers asked her to proceed with the payment while she was on the page.




**ALWAYS BE CAREFUL**



# ಆನ್‌ಲೈನ್ ಮೋಸಗಳು

## ಸಾಮಾಜಿಕ ಜಾಲತಾಣಗಳಲ್ಲಿ ಹಿರಿಯ ಐಎಎಸ್ ಅಧಿಕಾರಿಯ ಫೋಟೋ ದುರ್ಬಳಕೆ

ಕರ್ನಾಟಕದ ಹಿರಿಯ ಐಎಎಸ್ ಅಧಿಕಾರಿಯೊಬ್ಬರು, ತಮ್ಮ ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಳಸಿ ತಮ್ಮ ಸಹೋದ್ಯೋಗಿಗಳ ಹತ್ತಿರಯಾರೋ ಕಿಡಿಗೇಡಿಗಳು ಹಣದ ಬೇಡಿಕೆ ಇಡುತ್ತಿದ್ದಾರೆ ಎಂದು ಆರೋಪಿಸಿ ಬೆಂಗಳೂರಿನಲ್ಲಿರುವ ಸೈಬರ್ ಅಪರಾಧ ಮತ್ತು ಆರ್ಥಿಕ ಅಪರಾಧಗಳಪೊಲೀಸ್ ಸ್ಟೇಶನ್‌ನಲ್ಲಿ ದೂರು ಸಲ್ಲಿಸಿದ್ದಾರೆ.

## ಇಂಜಿನಿಯರ್ ಒಬ್ಬರಿಗೆ ₹ 80,000 ಆನ್‌ಲೈನ್ ಮೋಸ

ಆನ್‌ಲೈನ್‌ನಲ್ಲಿ ಮನೆ ಹುಡುಕುತ್ತಿದ್ದ ಕರ್ನಾಟಕದ ಕಿರಿಯ ಇಂಜಿನಿಯರ್ ಒಬ್ಬರಿಗೆ ತಾನು ಮನೆಯೊಡೆಯ ಎಂದು ಸುಳ್ಳು ಹೇಳಿದ ಆನ್‌ಲೈನ್‌ಮೋಸಗಾರ ₹ 82,100 ಮೋಸ ಮಾಡಿದ್ದಾನೆ. ಐದರಿಂದ ಆರು ವಹಿವಾಟುಗಳಲ್ಲಿ ₹ 82,100 ಮೊತ್ತವನ್ನು ಮೋಸಗಾರನ ಖಾತೆಗೆಕಳುಹಿಸಲಾಯಿತು. ಆ ಮೋಸಗಾರನು ವಹಿವಾಟುಗಳು ಪೂರ್ತಿಯಾಗಲಿಲ್ಲ ಎಂದು ಸುಳ್ಳು ಹೇಳಿ ಮತ್ತೆ ಹಣ ಕಳುಹಿಸುವಂತೆ ಬೇಡಿಕೆ ಇಡುವುದನ್ನುಮುಂದುವರಿಸಿದನು. ಅವನು ಇನ್ನೂ ಹತ್ತು ಸಾವಿರಕ್ಕೆ ಬೇಡಿಕೆ ಇಟ್ಟಾಗ, ಇಂಜಿನಿಯರ್‌ಗೆ ತಾನು ಮೋಸ ಹೋಗುತ್ತಿರುವುದು ಅರಿವಾಗಿದೆ. ಅವರುಕೂಡಲೇ ಸೈಬರ್ ಅಪರಾಧ ವಿಭಾಗಕ್ಕೆ ಈ ಘಟನೆಯ ಬಗ್ಗೆ ತಿಳಿಸಿದರು.

## ಸುಲಿಗೆಯ ಉರುಳಿಗೆ ಸಿಕ್ಕಿದ ವ್ಯಕ್ತಿ, ಸುಲಿಗೆಗಾರರಿಗೆ 5.28 ಲಕ್ಷ ಪಾವತಿಸಿದರು

ಫೇಸ್‌ಬುಕ್‌ನಲ್ಲಿ 54 ರ ಹರೆಯದ ಹೆಂಡತಿ ಇಲ್ಲದ ಗಂಡಿನ ಗೆಳೆತನ ಗಳಿಸಿದ ಹೆಂಗಸೊಬ್ಬಳು, ಮೋಸದಿಂದ ಆ ಗಂಡಸು ಫೋನಿನಲ್ಲಿಬೆತ್ತಲಾಗುವಂತೆ ಮಾಡಿ, ಅವರನ್ನು ಸುಲಿಗೆಯ ಹಳ್ಳಕ್ಕೆ ಕೆಡವಿದಳು.
ಆ ಗಂಡಸಿಗೆ ಈ ವಿಡಿಯೊ ತೋರಿಸಿ ಹಾಗೂ ಫೋನಿನಲ್ಲಿ ತಾವು ಕೇಂದ್ರ ತನಿಖಾ ದಳದ (ಸಿಬಿಐ) ಅಧಿಕಾರಿ ಮತ್ತು ಯೂಟ್ಯೂಬ್ ಅಧಿಕಾರಿ ಎಂದುಸೋಗುಹಾಕಿದ ಇನ್ನಿಬ್ಬರು ಮೋಸಗಾರರ ನೆರವಿನಿಂದ ಈ ಹೆಂಗಸು 5.28 ಲಕ್ಷ ಸುಲಿಗೆ ಮಾಡಿದಳು.

## ಆನ್‌ಲೈನ್ ಮೋಸದಲ್ಲಿ 5.35 ಲಕ್ಷ ಕಳೆದುಕೊಂಡ ಮಂಗಳೂರಿನ ವ್ಯಕ್ತಿ

ಮಂಗಳೂರಿನ ವ್ಯಕ್ತಿಯೊಬ್ಬರಿಗೆ ಕರೆ ಮಾಡಿದ ಮೋಸಗಾರನು, ತಾನು ಅವರ ಗೆಳೆಯನ ತಮ್ಮ ಎಂದು ಹೇಳಿಕೊಂಡ. ಅಣ್ಣನ ಸರ್ಜರಿಗಾಗಿ 5 ಲಕ್ಷಬೇಕಿದೆ ಎಂದು ಸುಳ್ಳು ಹೇಳಿದ.
ಮೋಸಗಾರನ ಮಾತನ್ನು ನಂಬಿದ ಆ ವ್ಯಕ್ತಿ ತಮ್ಮ ಓಟಿಪಿ ನಂಬರ್ ಕೊಟ್ಟರು. ಮೋಸಗಾರನು ಒಂದು ವಹಿವಾಟಿನಲ್ಲಿ 4.50 ಲಕ್ಷ ಹಣಹೊರತೆಗೆದರೆ, ಉಳಿದ ಹಣವನ್ನು ಕಂತುಗಳಲ್ಲಿ ಹೊರತೆಗೆದ. ಒಟ್ಟು ಹೊರತೆಗೆದ ಮೊತ್ತ 5.35 ಲಕ್ಷ.

## ಕ್ಯಾಬ್ ರದ್ದುಮಾಡಿದ ಶುಲ್ಕ ಕಟ್ಟುವಾಗ 94,367 ರೂಪಾಯಿ ಕಳೆದುಕೊಂಡ ಬೆಂಗಳೂರಿನ ಹೆಂಗಸು

ಮೋಸಹೋದ ಹೆಂಗಸು ತಮ್ಮ ನೆಂಟರ ಮನೆಗೆ ಹೋಗಲು ಆನ್‌ಲೈನ್‌ನಲ್ಲಿ ಕ್ಯಾಬ್ ಬುಕ್ ಮಾಡಿ, ಬಳಿಕ ರದ್ದುಪಡಿಸಿದರು. ಡ್ರೈವರ್ ಆಕೆಗೆರದ್ದುಪಡಿಸಿದ ಶುಲ್ಕವನ್ನು ಕಟ್ಟಲು ಹೇಳಿದಾಗ, ಅವರು ಆನ್‌ಲೈನ್‌ಗೆ ಹೋಗಿ, ಅವರಿಗೆ ನೀಡಲಾಗಿದ್ದ ನಂಬರ್‌ನಲ್ಲಿ ಸಹಾಯಕರಿಗೆ ಕರೆ ಮಾಡಿದರು.
ಬಳಕೆದಾರರ ನೆರವು ತಂಡದ ಸಹಾಯಕರು ಅವರಿಗೆ ನೆರವಾಗುವುದಾಗಿ ಹೇಳಿ Anydesk [ದೂರದಿಂದಲೇ ಫೋನ್ ಇಲ್ಲವೇ ಕಂಪ್ಯೂಟರ್ ಅನ್ನುಅಂಕೆಯಲ್ಲಿಡಬಹುದಾದ ಒಂದು ಸಾಫ್ಟ್‌ವೇರ್] ಇಳಿಸಿಕೊಳ್ಳಲು ಮತ್ತು ಆಕೆಯ ಡೆಬಿಟ್ ಕಾರ್ಡ್ ಸ್ಕ್ಯಾನ್ ಮಾಡಲು ಕೊಂಡಿ ಕಳುಹಿಸಿದರು. ಆಕೆತಮ್ಮ ಡೆಬಿಟ್ ಕಾರ್ಡ್ ಸ್ಕ್ಯಾನ್ ಮಾಡಿದ ಕೂಡಲೇ, 94,367 ರೂಪಾಯಿ ದೋಚಲಾಯಿತು.

## ಹೆಸರಾಂತ ರೆಕ್ರೂಟ್‌ಮೆಂಟ್ ವೆಬ್‌ಸೈಟ್‌ವೊಂದರ ಪ್ರತಿನಿಧಿಗಳು ಎಂಬ ಸೋಗಿನಲ್ಲಿದ್ದ ಆನ್‌ಲೈನ್ ಮೋಸಗಾರರ ಬಲೆಗೆ ಬಿದ್ದ ಹೆಂಗಸು

ಪ್ರತಿನಿಧಿಗಳ ಸೋಗಿನಲ್ಲಿದ್ದ ಮೋಸಗಾರರು ಹೆಂಗಸಿಗೆ ಕರೆ ಮಾಡಿ, ತಾವು ನೀಡುತ್ತಿದ್ದ 'ವೃತ್ತಿಪರ' ಸೇವೆಗೆ 49 ರೂಪಾಯಿ ಕಟ್ಟಿ ಚಂದಾದಾರರಾಗಲುಕೇಳಿಕೊಂಡರು. ಸರಿಯಾದ ವೆಬ್‌ಸೈಟ್‌ನಂತೆಯೇ ಕಾಣುವ ಮೋಸದ ವೆಬ್‌ಸೈಟ್‌ಗೆ ಹೋಗುವ ಕೊಂಡಿಯನ್ನು ಆಕೆಗೆ ಕಳುಹಿಸಿದರು. ಆಕೆ ಆವೆಬ್‌ಸೈಟ್‌ನ ಪುಟದಲ್ಲಿರುವಾಗ, ಪಾವತಿ ಮಾಡುವಂತೆ ಹೇಳಿದರು.




**ALWAYS BE CAREFUL**


ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್
ಉನ್ನತಜ್ಞಾನ ಕೇಂದ್ರ
ಆನ್‌ಲೈನ್ ಡೆಲಿವರಿ ಮೋಸಗಳ ಬಗ್ಗೆ ಎಚ್ಚರದಿಂದಿರಿ
ಹರೀಶ್ ಅವರು ರೂ.25 ಕಟ್ಟದೆ ಇರುವುದಕ್ಕಾಗಿ ಅವರಿಗೆ ಕಳುಹಿಸಲ್ಪಟ್ಟ ಪ್ಯಾಕೇಜನ್ನು ಡೆಲಿವರಿ ಮಾಡದೆ ತಡೆಹಿಡಿಯಲಾಗಿದೆ ಎಂದು ಅವರಿಗೆ ಎಸ್ ಎಮ್‌ಎಸ್ ಬರುತ್ತದೆ. ಪಾವತಿ ಮಾಡುವ ಲಿಂಕ್ ಅದರಲ್ಲಿರುತ್ತದೆ.
ನಿಮಗೆ ಕಳುಹಿಸಿದ ಪ್ಯಾಕೇಜ್ ಅನ್ನು 25 ರೂ.ಗಳನ್ನು ಪಾವತಿಸದ ಕಾರಣ ವಿತರಣೆಗಾಗಿ ತಡೆಹಿಡಿಯಲಾಗಿದೆ. ಪಾವತಿಯನ್ನು ಮಾಡಲು ಕೆಳಗೆ ಲಿಂಕ್ ಅನ್ನು ಲಗತ್ತಿಸಲಾಗಿದೆ.
ಇದು ಯಾವ ಪ್ಯಾಕೇಜಪ್ಪ! ಬರೀ 25 ರೂಪಾಯಿ ಕಟ್ಟಬೇಕಾ? ಲಿಂಕ್ ಕ್ಲಿಕ್ ಮಾಡಿ ನೋಡ್ತೀನಿ.
ಅವನು ಲಿಂಕ್ ಕ್ಲಿಕ್ ಮಾಡ್ತಿದ್ದ ಹಾಗೇ, ಅವನ ಬ್ಯಾಂಕ್ ವಿವರಗಳ್ನ ಹಂಚಿಕೊಳ್ಳಬಹುದಾದ ಪುಟ ತೆರೆಯುತ್ತೆ. ನಾನು ಬೇಗ ಆ ಮಾಹಿತಿ ಕದ್ದು, ಓಟಿಪಿ, ಪಿನ್ ಯಾವುದೂ ಇಲ್ಲದೆ ಅಂತರರಾಷ್ಟ್ರೀಯ ವಹಿವಾಟುಗಳ್ನ ಮಾಡ್ಬಹುದು.
ಹರೀಶ್, ನಿಲ್ಲಿ! ಈ ಎಸ್ ಎಮ್‌ಎಸ್ ಸರಿಯಾಗಿದೆ ಅಂತ ನಿಮಗ್ ಹೇಗ್ ಗೊತ್ತು? ಪ್ಯಾಕೇಜನ್ನ ಯಾರು ಕಳುಹಿಸಿರೋದು ಅಂತ ಕೂಡ ಇದರಲ್ಲಿಲ್ಲ.
• ನಿಮಗೆ ಯಾವುದೋ ಪ್ಯಾಕೇಜ್ ಬಂದಿದೆ ಎನ್ನುತ್ತಾ, ಒಂದು ಎಸ್‌ಎಮ್ ಎಸ್ ಇಲ್ಲವೇ ಇಮೇಲ್ ಮೂಲಕ ಆನ್ ಲೈನ್ ಡೆಲಿವರಿ ಮೋಸಗಳು ಶುರುವಾಗುತ್ತವೆ.
• ಅವುಗಳಲ್ಲಿನ ಲಿಂಕ್ ಕ್ಲಿಕ್ ಮಾಡಿದರೆ, ನಿಮ್ಮ ವೈಯಕ್ತಿಕ ಮಾಹಿತಿ ಬರೆಯಿರಿ ಎನ್ನುವ ವೆಬ್‌ಸೈಟ್ ತೆರೆಯಬಹುದು ಇಲ್ಲವೇ ಗುಟ್ಟಾಗಿ ನಿಮ್ಮ ಮಾಹಿತಿ ಕದಿಯುವ ಮಾಲ್‌ವೇರ್ ನಿಮ್ಮ ಡಿವೈಸ್ ನಲ್ಲಿ ಇನ್‌ಸ್ಟಾಲ್ ಆಗಬಹುದು.
• ಓಟಿಪಿ ಇಲ್ಲವೇ ಪಿನ್ ಇಲ್ಲದೆ ಅಂತರರಾಷ್ಟ್ರೀಯ ವಹಿವಾಟುಗಳನ್ನು ಮಾಡಬಹುದು. ಕಾರ್ಡ್ ನಂಬರ್, ಕಾರ್ಡ್ ನ ಗಡುವು ಮುಗಿಯುವ ದಿನಾಂಕ ಮತ್ತು ಸಿವಿವಿ ನಂಬರ್ ಇದ್ದರೆ ಸಾಕು.
• ನಿಮ್ಮ ಕಾರ್ಡಿನಿಂದ ಅಂತರರಾಷ್ಟ್ರೀಯ ವಹಿವಾಟುಗಳನ್ನು ಮಾಡುವಂತಿದ್ದರೆ ಎಚ್ಚರಿಕೆಯಿಂದಿರಿ.
@CySecKCoE
ನಮ್ಮ ಸುದ್ದಿಪತ್ರ ಸೈಬರ್ ವರ್ತಿಕಾಗೆ ಚಂದಾದಾರರಾಗುವ ಮೂಲಕ ಸೈಬರ್ ಸುರಕ್ಷತೆಯ ಕುರಿತು ನಿಮ್ಮನ್ನು ನವೀಕರಿಸಿಕೊಳ್ಳಿ
https://zcmp.in/BH6y


CySecK
Cyber Security Karnataka
K-Tech CoE for Cyber Security
Beware of online delivery scams
Harish gets an SMS saying that the package sent to him has been withheld for delivery due to a non-payment of Rs 25. There is a link attached to make the payment.
The package sent to you has been withheld for delivery due to a non-payment of Rs 25. There is a link attached below make the payment.
I wonder which package this is. It is only Rs 25; let me click the link and check.
Once he clicks the link, it will direct him to share his bank details; I can steal that information quickly and make international transaction without OTP or PIN.
Hey, wait! How do you know that this message is genuine? It doesn't even say where this package is from.
• Online delivery scams usually start with an SMS or an email about delivering a package to your address.
• The link attached may open a website that prompts you to enter personal details or install malware on your device that can secretly steal your information.
• One can do an international transaction without OTP or PIN. All you need are your card details such as Card number, Date of Expiry and CVV.
• Beware if your card is activated for international transactions.
@CySecKCoE
Keep yourselves updated on cybersecurity by subscribing to our newsletter Cyber Vartika
https://zcmp.in/BH6y


DO NOT FALL FOR
OFFERING LOAN !!!!!




ಸಾಲ ಸಿಗುತ್ತದೆ ಎಂಬ
ನಂಬದಿರಿ


ಸೈಬರ್ ಗ್ರೂಮಿಂಗ್


DEPARTMENT OF
ITBT
Issued in public intrest by
CySecK
K-Tech CoE for Cyber Security

# Useful links | ಉಪಾಯುಕ್ತ ಲಿಂಕ್ಗಲ್ಲು

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು cybercrime.gov.in
- ತಪ್ಪು ಮಾಹಿತಿ ಗುರುತಿಸಲು -https://factcheck.ksp.gov.in
- ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**





- ಕರ್ನಾಟಕದಲ್ಲಿ ಸೈಬರ್ ಸುರಕ್ಷತೆ ತಿಳಿವನ್ನು ಬಲಪಡಿಸುವ ಸಲುವಾಗಿ ಒಗ್ಗೂಡಿ ಕೆಲಸಮಾಡಲು **CYSECK** ಮತ್ತು ಡೆಲ್ ಟೆಕ್ನಾಲಜೀಸ್ ಇಂಡಿಯಾಒಡಂಬಡಿಕೆಯ ದಾಖಲೆಗೆ ಸಹಿ ಹಾಕಿವೆ. ಈ ಪಾಲುದಾರಿಕೆಯು, ವಿದ್ಯಾರ್ಥಿಗಳು, ಸ್ಟಾರ್ಟ್-ಅಪ್, ಸರ್ಕಾರ, ಮಾಲ್ ಮತ್ತು ಮಧ್ಯಮ ಪ್ರಮಾಣದಉದ್ದಿಮೆಗಳು ಮತ್ತು ರಾಜ್ಯದ ಇತರ ಪಾಲುದಾರರಿಗೆ ಸುರಕ್ಷಿತ ಮತ್ತು ಸುಭದ್ರವಾದ ಡಿಜಿಟಲ್ ಪರಿಸರವನ್ನು ಕಟ್ಟುವ ಗುರಿಗಳಿಗೆ ತಕ್ಕಂತೆಯೇ ಇದೆ.
- ಈ ಒಡಂಬಡಿಕೆಗೆ ಸೆಪ್ಟೆಂಬರ್ 12 ರಂದು ಸಹಿ ಹಾಕಲಾಯಿತು. ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ, ವಿಜ್ಞಾನ ಮತ್ತುತಂತ್ರಜ್ಞಾನ, ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗಳ ಸಚಿವರಾದ ಡಾ. ಅಶ್ವಥ್ ನಾರಾಯಣ್‌ಹಾಜರಿದ್ದರು.

- **CySecK** and **Dell Technologies** India have signed an MoU to collaborate on strengthening cybersecurity awareness in Karnataka. This partnership is in line with the goals of building a safe and secure digital environment for students, start-ups, the government, mall and medium-scale enterprises and other stakeholders in the state.
- The MoU was signed on September 12, in the presence of Dr. Ashwatha Narayan C N, Minister for Information Technology, Biotechnology, Science and Technology; Higher Education; Skill Development, Entrepreneurship & Livelihood – Government of Karnataka.

- **ಅಕ್ಟೋಬರ್ ಮಾಹೆಯನ್ನು ಜಾಗತಿಕ ಮಟ್ಟದಲ್ಲಿ ರಾಷ್ಟ್ರೀಯ ಸೈಬರ್ ಭದ್ರತೆಯ ಜಾಗೃತಿ ಮಾಸವನ್ನಾಗಿ ಗುರುತಿಸಲಾಗಿದೆ. ಇದರ ಅಂಗವಾಗಿ CySecK ನ ವಿವಿಧ ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ಲಿಂಕ್‌ಡ್‌ಇನ್, ಕೂ ಸೇರಿದಂತೆ ಎಲ್ಲಾ ಸಾಮಾಜಿಕ ಮಾಧ್ಯಮಗಳಲ್ಲಿ ಅಕ್ಟೋಬರ್ ೦೧ ರಿಂದ ಸೈಬರ್ ಭದ್ರತೆಗೆ ಸಂಬಂಧಿಸಿದ ಉಪಯುಕ್ತ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದೇವೆ. ನಮ್ಮ ಓದುಗರು ತಮ್ಮ ಸ್ನೇಹಿತರು ಮತ್ತು ಕುಟುಂಬದೊಂದಿಗೆ ಮಾಹಿತಿಯೊತ್ತ ಈ ಪೋಸ್ಟ್‌ಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸುತ್ತೇವೆ. ಈ ಪೋಸ್ಟ್‌ಗಳು ನಮ್ಮ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿದಿನ ೧೧ಗಂಟೆಗೆ ಲಭ್ಯವಿದ್ದು, ಎಲ್ಲರೂ ಒಟ್ಟಾಗಿ ಸೈಬರ್ ಸುರಕ್ಷಿತ ವಾತಾವರಣವನ್ನು ಸೃಷ್ಟಿಸಲು ಕೈ ಜೋಡಿಸಿ. ಇದರ ಜೊತೆಗೆ ನಮ್ಮ ಜಾಲತಾಣ https://cs-coe.iisc.ac.in/ ದಲ್ಲಿ ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ರಾಜ್ಯದ ಎಲ್ಲಾ ನಾಗರೀಕರು ಈ ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದೆ. ವಿಜೇತರಿಗೆ CySecK ಆಕರ್ಷಕ ಬಹುಮಾನಗಳನ್ನು ನೀಡಿ ಗೌರವಿಸಲಿದೆ. ಮತ್ಯಾಕೆ ತಡ, ಇಂದೇ CySecK ಜಾಲತಾಣಕ್ಕೆ ಭೇಟಿ ನೀಡಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ.**

- **October is observed as National Cyber Security Awareness Month. Starting from 1st October, we will be posting cybersecurity related informative posters each day this month through our social media handles. We encourage our readers to check these posters and share the same with their friends and family. The posts will be published at 11:00 AM each day of this month. Let us create a cyber secure society together.**
- **We are running exciting contests on our website. Put your cybersecurity awareness cap on and participate.**
- **Winners will hold a chance to win exciting goodies from CySecK. Participate now!!**
  https://cs-coe.iisc.ac.in/

# About CySecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government’s K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.